**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ರವರ**

**ನಿಯಮ-72ರ ಗಮನ ಸೆಳೆಯುವ ಸೂಚನೆಗೆ ಉತ್ತರ**

---

**ವಿಷಯ:** **ಹಗರಿಬೊಮ್ಮನಹಳ್ಳಿ ಮೂಲದ ಇಸ್ಪೀಟ್ ಗ್ಯಾಂಬ್ಲರ್ ಒಬ್ಬರು ಕಳೆದ ನಾಲ್ಕೈದು ತಿಂಗಳಿನಿಂದ ಸಿಂಧನೂರು ತಾಲ್ಲೂಕಿಗೆ ಬಂದು ಆಯಕಟ್ಟಿನ ನಿರ್ಜನ ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದ ಇಸ್ಪೀಟ್ ಆಟ ನಡೆಸುತ್ತಿರುವ ಬಗ್ಗೆ ದಿನ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ ಹಾಗೂ ಸದರಿ ಇಸ್ಪೀಟ್ ಗ್ಯಾಂಬ್ಲರ್‌ಗೆ ಸ್ಥಳೀಯವಾಗಿ ಕೆಲವರು ಬೆಂಬಲ ನೀಡುತ್ತಿದ್ದು, ಈ ರೀತಿ ಕಾನೂನು ಬಾಹಿರ ಚಟುವಟಿಕೆ ನಡೆಸುತ್ತಿರುವವರಿಗೆ ಹಾಗೂ ಇದಕ್ಕೆ ಬೆಂಬಲ ನೀಡುತ್ತಿರುವವರಿಗೆ ತುರ್ತಾಗಿ ಕಾನೂನು ಕ್ರಮ ಜರುಗಿಸುವ ಕುರಿತು.**

**ಉತ್ತರ:** ಹಗರಿಬೊಮ್ಮನಹಳ್ಳಿ ಮೂಲದ ಇಸ್ಪೀಟ್ ಗ್ಯಾಂಬ್ಲರ್ ಒಬ್ಬರು ಕಳೆದ ನಾಲ್ಕೈದು ತಿಂಗಳಿನಿಂದ ಸಿಂಧನೂರು ತಾಲ್ಲೂಕಿಗೆ ಬಂದು ಆಯಕಟ್ಟಿನ ನಿರ್ಜನ ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದ ಇಸ್ಪೀಟ್ ಆಟ ನಡೆಸುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ವರದಿಯಾಗಿರುವ ದಿನ ಪತ್ರಿಕೆಯನ್ನು ಪರಿಶೀಲನೆ ಮಾಡಲಾಗಿ, ಈ ರೀತಿಯಾಗಿ ಯಾವುದೇ ಇಸ್ಪೀಟ್ ಜೂಜಾಟ ನಡೆದ ಬಗ್ಗೆ ಮಾಹಿತಿ ತಿಳಿದು ಬಂದಿರುವುದಿಲ್ಲ. ಮುಂದಿನ ದಿನಗಳಲ್ಲಿ ಇಸ್ಪೀಟ್ ಜೂಜಾಟ ಕಂಡುಬಂದಲ್ಲಿ ಅಥವಾ ಇಸ್ಪೀಟ್ ಜೂಜಾಟ ಆಡುವ, ನಡೆಸುತ್ತಿರುವ ಬಗ್ಗೆ ಮಾಹಿತಿ ಬಂದಲ್ಲಿ ಸೂಕ್ತ ಕಾನೂನು ಕ್ರಮ ಜರುಗಿಸಲಾಗುತ್ತದೆ.

ಅಲ್ಲದೇ ಇಸ್ಪೀಟ್ ಜೂಜಾಟ ನಡೆಸಲು ಯಾವುದೇ ಅನುಮತಿ ನೀಡಿರುವುದಿಲ್ಲ ಹಾಗೂ ಸ್ಥಳೀಯವಾಗಿ ಬೆಂಬಲ ನೀಡಿರುವುದಿಲ್ಲ. ಈ ಬಗ್ಗೆ ಮಾಹಿತಿ/ದೂರು ಬಂದಲ್ಲಿ ಕೂಡಲೆ ಕಾನೂನು ಕ್ರಮಕ್ಕೈಗೊಳ್ಳಲಾಗುತ್ತಿದೆ. ಇದುವರೆಗೆ ಸಿಂಧನೂರು ನಗರ/ಗ್ರಾಮೀಣ ವೃತ್ತ ವ್ಯಾಪ್ತಿಯಲ್ಲಿ ಇಸ್ಪೀಟ್ ಜೂಜಾಟ ಆಡುವವರ ಮೇಲೆ ದಾಖಲಾದ ಪ್ರಕರಣಗಳ ವಿವರ ಈ ಕೆಳಗಿನಂತಿದೆ :-

| ಕ್ರ ಸಂ | ಪೊಲೀಸ್ ಠಾಣೆ | ಪ್ರಕರಣಗಳ ಸಂಖ್ಯೆ(2025) | ಜಪ್ತಿ ಮಾಡಲಾದ ಮೊತ್ತ ರೂ. |
|---|---|---|---|
| 01 | ಸಿಂಧನೂರು ಗ್ರಾಮೀಣ ಠಾಣೆ | 21 | 3,82,840/- |
| 02 | ಬಳಗಾನೂರು ಠಾಣೆ | 12 | 1,62,960/- |
| 03 | ತುರವಿಹಾಳ ಠಾಣೆ | 21 | 2,51,210/- |
| 04 | ಸಿಂಧನೂರು ನಗರ ಠಾಣೆ | 08 | 1,84,660/- |
| | **ಒಟ್ಟು** | **62** | **9,81,670/-** |

**ಸಂಖ್ಯೆ: ಹೆಚ್‌ಡಿ 579 ಎಸ್‌ಎಸ್‌ಟಿ 2025**

**(ಡಾ: ಜಿ ಪರಮೇಶ್ವರ)**
**ಗೃಹ ಸಚಿವರು.**